# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570 006.

ಸಂಖ್ಯೆ : ಕರಾಮುವಿ/ಅಸಾವಿ/03-25/2020-21 ದಿನಾಂಕ: 24/12/2020

### ದರಪಟ್ಟಿ ಆಹ್ವಾನದ ಬಗೆಗೆ

ವಿಷಯ: 2021ನೇ ನೂತನ ವರ್ಷದ ವಾಲ್ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ ದರಪಟ್ಟಿ ಕೋರಿ.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 24/12/2020 [ಕಂಡಿಕೆ-14]

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2021ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಾಲ್ ಕ್ಯಾಲೆಂಡರ್‌ಗಳನ್ನು ಈ ಕೆಳಕಂಡ ಷರತ್ತು ಮತ್ತು Specification ರೀತ್ಯಾ ಮುದ್ರಿಸಿ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು ತಿಳಿಸಲು (ಎಲ್ಲಾ ತೆರಿಗೆ ಸೇರಿದಂತೆ) ತಮ್ಮಿಂದ ದರಪಟ್ಟಿ ಆಹ್ವಾನಿಸಿದೆ.

**Specification:-**

1. 170 ಜಿ.ಎಸ್.ಎಂ. ತೂಕದ ಉತ್ತಮ ಕಂಪನಿಯ ಆರ್ಟ್ ಪೇಪರ್ ಬಳಸಿ ಮಲ್ಟಿಕಲರ್‌ನಲ್ಲಿ ಮುದ್ರಿಸಬೇಕಾಗುತ್ತದೆ.
2. ವಾಲ್ ಕ್ಯಾಲೆಂಡರ್ 15 X 20 ಇಂಚು ಅಳತೆಯಲ್ಲಿ ವ್ಯತ್ಯಾಸವಿಲ್ಲದಂತೆ ಸಿದ್ಧಪಡಿಸಬೇಕಾಗುತ್ತದೆ.
3. ಗೋಡೆಗೆ ನೇತು ಹಾಕಲು ಅನುವಾಗುವಂತೆ ಕ್ಯಾಲೆಂಡರ್‌ಗಳಿಗೆ ವೈರ್‌ಬೈಂಡ್ ಹ್ಯಾಂಗರ್‌ಗಳನ್ನು ಅಳವಡಿಸಬೇಕಾಗುತ್ತದೆ.
4. 07 (ಏಳು) ಶೀಟ್‌ಗಳಲ್ಲಿ (ಒಂದು ಮುಖಪುಟ ಸೇರಿ ಉಳಿದ 12 ತಿಂಗಳ ಮಾಹಿತಿಯು 6 ಶೀಟ್ಸ್‌ಗಳಲ್ಲಿ ಹಿಂದೆ ಮುಂದೆ ಬರುವಂತೆ) ಕ್ಯಾಲೆಂಡರ್ ಸಿದ್ಧಪಡಿಸಬೇಕಾಗುತ್ತದೆ. ಪ್ರತಿ ಪುಟದಲ್ಲಿ ವಿ.ವಿ. ನಿಲಯ ಒದಗಿಸುವ ಮಾಹಿತಿ ಹಾಗು ಚಿತ್ರಸಹಿತ ಮಲ್ಟಿಕಲರ್‌ನಲ್ಲಿ ಮುದ್ರಿಸಬೇಕಾಗುತ್ತದೆ.
5. ಈ ಸ್ಪೆಷಿಫಿಕೇಷನ್‌ನಲ್ಲಿ 07 (ಏಳು) ಶೀಟ್‌ಗಳ ವಾಲ್ ಕ್ಯಾಲೆಂಡರ್‌ಗೆ ತಗಲುವ ದರವನ್ನು ವಿನ್ಯಾಸ ಸೇರಿದಂತೆ 1000 (ಒಂದು ಸಾವಿರ ಮಾತ್ರ) ಕ್ಯಾಲೆಂಡರ್‌ಗಳನ್ನು ಮುದ್ರಿಸಿ ವಿ.ವಿ. ನಿಲಯದ ಕೇಂದ್ರ ಕಚೇರಿಗೆ ನಿಗದಿತ ವೇಳೆಗೆ ಸರಬರಾಜು ಮಾಡಲು ತಗಲುವ (ತೆರಿಗೆ ಸೇರಿದಂತೆ) ದರವನ್ನು ಸೂಚಿಸತಕ್ಕದ್ದು.

**ಷರತ್ತುಗಳು:-**

1. ವಾಲ್ ಕ್ಯಾಲೆಂಡರ್‌ಗಳನ್ನು ಕಾರ್ಯಾದೇಶದಲ್ಲಿ ತಿಳಿಸಿದ ದಿನಾಂಕದೊಳಗೆ ಸಿದ್ಧಪಡಿಸಿ ಸರಬರಾಜು ಮಾಡಲು ಸಿದ್ಧರಿರಬೇಕಾಗುತ್ತದೆ.
2. ಮೇಲಿನ Specification ನಂತೆ ಸಿದ್ಧಪಡಿಸಿ ಸರಬರಾಜು ಮಾಡಬೇಕು ತೂಕ/ಅಳತೆ/ಗುಣಮಟ್ಟದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ದಂಡ ವಿಧಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
3. ಒಮ್ಮೆ ದರಪಟ್ಟಿ ಸಲ್ಲಿಸಿ, ಕನಿಷ್ಠತಮ ದರ ನಿಗದಿಯಾದ ನಂತರ ಸಿದ್ಧಪಡಿಸಲು ಸಬೂಬು ನೀಡಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತದೆ.
4. ದರಪಟ್ಟಿ ಕರೆದು ನಿಗದಿಪಡಿಸುವ ದರವು ಕಾರ್ಯಾದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ (365 ದಿನಗಳು) ಅವಧಿಗೆ ಚಾಲ್ತಿಯಲ್ಲಿ ಇರುತ್ತದೆ.
5. ಸದರಿ ದರಪಟ್ಟಿಯನ್ನು ಅಂಗೀಕರಿಸುವ / ತಿರಸ್ಕರಿಸುವ ಹಕ್ಕನ್ನು ವಿ.ವಿ ನಿಲಯವು ಹೊಂದಿರುತ್ತದೆ.
6. ವಿ.ವಿ ಯಲ್ಲಿ GST ನೊಂದಣಿದಾರರಿಗೆ ಮಾತ್ರ ಮುದ್ರಣ ಕೆಲಸ ನಿರ್ವಹಿಸಲು ಅವಕಾಶವಿದ್ದು, ಮುದ್ರಣ ಕೆಲಸದ ನಂತರ ಹುಂಡಿಯೊಂದಿಗೆ ಕಡ್ಡಾಯವಾಗಿ PAN ಮತ್ತು GST ಸಂಖ್ಯೆಯನ್ನು ನಮೂದಿಸಬೇಕಾಗುತ್ತದೆ.
7. ಮುದ್ರಕರು ಮುದ್ರಣದ ನಂತರ ಹುಂಡಿ ಸಲ್ಲಿಸುವಾಗ GST ತೆರಿಗೆ ಕಟಾಯಿಸುವ ಹುಂಡಿಗಳಲ್ಲಿ ವಿ.ವಿ.ಯ GST ಸಂಖ್ಯೆ: 29AAAGK0051J1ZI ಅನ್ನು ತಮ್ಮ ಹುಂಡಿಗಳಲ್ಲಿ ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ.
8. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು **"2021ರ ನೂತನ ವರ್ಷದ ವಾಲ್ ಕ್ಯಾಲೆಂಡರ್ ಮುದ್ರಣದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ: 30-12-2020ರ ಸಂಜೆ 05 ಘಂಟೆಯೊಳಗೆ **"ಕುಲಸಚಿವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು-06"** ಇವರ ಹೆಸರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸುವುದು. ಅಂಚೆ ವಿಳಂಬಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರಿಯಲ್ಲ.

ಆದೇಶದ ಮೇರೆಗೆ

ಕುಲಸಚಿವ

ಪ್ರತಿಗಳು :-

1. ವಿಶೇಷಾಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ.
3. ಹಣಕಾಸು ಅಧಿಕಾರಿಗಳು, ಕರಾಮುವಿ.
4. ನಿರ್ದೇಶಕರು ಐ.ಟಿ ವಿಭಾಗ, ಕರಾಮುವಿ (ವಿ.ವಿ.ಯ ಅಂತರ್ ಜಾಲದಲ್ಲಿ ಪ್ರಕಟಿಸಲು)
5. ಕಚೇರಿ ಪ್ರತಿ.

Scanned with CamScanner